International Journal of Kannada Research 2016; 2(2): 41-43




International Journal of Kannada Research
www.kannadajournal.com

**ISSN: 2454–5813**
IJSR 2016; 2(2): 41-43
© 2016 IJKS
www.kannadajournal.com
Received: 10-03-2016
Accepted: 12-04-2016

**ಮಯೂರ ಕುದರಿ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ,
ರಾಚವಿವಿ ಸ್ನಾತಕೋತ್ತರ ಕೇಂದ್ರ, ವಿಜಾಪೂರ.

**Correspondence**
**ಮಯೂರ ಕುದರಿ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ,
ರಾಚವಿವಿ ಸ್ನಾತಕೋತ್ತರ ಕೇಂದ್ರ, ವಿಜಾಪೂರ.

# ಜಾತಿರಹಿತ ಸಮಾಜಕ್ಕೆ ಬಸವಣ್ಣನ ವಿಚಾರಗಳು

**ಮಯೂರ ಕುದರಿ**

ಮನುಕುಲದ ಇತಿಹಾಸದಲ್ಲಿ ಹಲವಾರು ಶರಣರು, ಮಹಾಪುರುಷರು ಆಗಿ ಹೋಗಿದ್ದಾರೆ ಅಂತಹವರಲ್ಲಿ ಕೇಲವೊಬ್ಬರು ಮಾತ್ರ ಇಂದಿಗೂ ಸಹಿತ ಅವರ ವಿಚಾರಗಳಿಂದ ಸದಾ ಚರ್ಚೆಯಲ್ಲಿ ಇದಿದ್ದಾರೆ, ಅಂತಹ ಮಹಾಪುರಷರಲ್ಲಿ ಬಸವಣ್ಣನವರು ಕೂಡಾ ಒಬ್ಬರು. ಇವರು 12ನೇ ಶತಮಾನದಲ್ಲಿ ಮಾಡಿದ ಕ್ರಾಂತಿಯು ಇಂದಿಗೂ ಹಲವಾರು ಪರಿಣಾಮಗಳನ್ನು ಬಿರುತ್ತಿದೆ ಎಂದು ಹೇಳಬಹುದು ಅದರಲ್ಲಿಯೂ ಜಾತಿರಹಿತ ಸಮಾಜದ ಕಲ್ಪನೆಗೆ ಬಂದಾಗ ಬುದ್ಧನ ನಂತರ ನಮಗೆ ಬೇಗನೆ ನೆನಪಿಗೆ ಬರುವವರೆಂದರೆ ಬಸವಣ್ಣನವರು., ಇವರು ಜಾತಿರಹಿತ ಸಮಾಜಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು, ಸಮಾಜದಲ್ಲಿ ಎಲ್ಲರೂ ಒಂದೇ, ಮೇಲು ಕೀಳು ಎಂಬ ವರ್ಗಗಳಿಲ್ಲಾ, ಎಲ್ಲರೂ ನಮ್ಮ ಕೂಡಲ ಸಂಗನ ಶರಣರೂ ಎಂದು ಹಲವಾರು ರೀತಿಯ ವಿಚಾರಗಳಲ್ಲಿ ಜನರಿಗೆ ತಿಳಿಹೇಳಿದರು. ಇದು ಅಲ್ಲದೆ ಒಂದು ಸಮಾಜ ಏಳ್ಗೆ ಹೊಂದಬೇಕೆಂದರೆ ಅಲ್ಲಿ ಜಾತಿಯತೆಯಾಗಲಿ, ಅಸ್ಪೃಶ್ಯತೆಯಾಗಲಿ, ಲಿಂಗ ಬೇದವಾಗಲಿ ಇರಕೂಡದು ಎಂದು ಒತ್ತಿ ಹೇಳಿದರು. ಈ ಜಾತಿಯತೆ ಕಲ್ಪನೆ ಮನುಷ್ಯರಲ್ಲಿ ಬಂದಾಗ ಸಮಾಜ ಅದೋಪತಿಗೆ ಹೋಗುತ್ತದೆ ಎಂದು ಹೇಳಿದರು ಮತ್ತು ಸಮಾಜದ ಕುಂಠಿತ ಬೆಳವಣಿಗೆ ಹೊಂದುತ್ತದೆ ಎಂದು ಸಾರಿ ಸಾರಿ ಹೇಳಿದರು. ಬಸವಣ್ಣನವರು ಕೇವಲ ಜಾತಿರಹಿತ ಸಮಾಜದ ಬಗ್ಗೆ ಅಷ್ಟೆ ಅಲ್ಲದೆ ಸ್ತ್ರೀ–ಪುರುಷರ ಸಮಾನತೆ, ಸ್ತ್ರೀಯರ ಸಾಮಾಜಿಕ ಹಕ್ಕುಗಳು, ಅಸ್ಪೃಶ್ಯರ ಉದ್ಧಾರ ಹೀಗೆ ಇನ್ನೂ ಹಲವಾರು ವಿಷಯಗಳಿಗೆ ಬಸವಣ್ಣನವರು ಹೋರಾಟ ಮಾಡಿ ಇಂದಿಗೂ ಸಹಿತ ಮಾನವ ಜನಾಂಗದ ಹೃದಯದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.

## ಪ್ರಸ್ಥಾವನೆ

ಜಗತ್ತಿನ ಇತಿಹಾಸದಲ್ಲಿ ವಿಭೂತಿ ಪುರುಷನೆಂದು ಖ್ಯಾತಿಯನ್ನು ಪಡೆದವರು, ಸಾಮಾಜಿಕ ಕ್ರಾಂತಿಯ ಹರಿಕಾರ, 12ನೇ ಶತಮಾನದ ಮಹಾನ ಮಾನವತಾವಾದಿ, 12ನೇ ಶತಮಾನದ ವಚನ ಕ್ರಾಂತಿಯ ಹರಿಕಾರ ಬಸವಣ್ಣನವರು., ಇವರು ಹುಟಿದ್ದು ಕ್ರಿ.ಶ. 1131ರಲ್ಲಿ ಒಂದು ಬ್ರಾಹ್ಮಣ ಕುಟುಂಬದಲ್ಲಿ ತಂದೆ ಮಾದರಸ ತಾಯಿ ಮಾದಲಾಂಬಿಕೆಯವರ ಉದರದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಜನಿವಾರವನ್ನು ಕಿತ್ತೆಸೆದು ಮಹಾನದೀರ, ಆಗಿನಿಂದಲೇ ಜಾತಿರಹಿತ ಸಮಾಜಕ್ಕೆ ಮುನ್ನುಡಿಯನ್ನು ಬರೆದಂತಹವರು ಭಕ್ತಿ ಭಂಡಾರಿ ಬಸವಣ್ಣನವರು. ಬಸವಣ್ಣನವರು ಬಾಲ್ಯದಿಂದಲೇ ಸ್ವತಂತ್ರ ವಿಚಾರವಾದಿಯಾಗಿದ್ದರು ತಮಗೆ ಅನಿಸಿದ್ದನ್ನು ಮಾಡುವ, ತಿಳಿದಿದ್ದನ್ನು ನುಡಿಯುವ ದಿಟ್ಟ ಸ್ವಭಾವದ ಹುಡುಗ ಮುದೊಂದು ದಿನ ಜಾತಿರಹಿತ ಸಮಾಜಕ್ಕೆ ತನ್ನ ಜೀವನವನ್ನೆ ಮುಡುಪಾಗಿಡುತ್ತಾನೆಂದು ಯಾರು ಊಹಿಸಿರಲಿಲ್ಲಾ ಎಂದೆನಿಸುತ್ತದೆ. ಬಸವಣ್ಣನವರು ಹುಟ್ಟುವುದಕ್ಕಿಂತ ಮುಂಚೆ ಅಂದರೆ ಅಂದಿನ ಸಮಾಜದಲ್ಲಿ ಜಾತಿ ಎನ್ನುವುದು ಬಹಳ ಕ್ಲಿಷ್ಟವಾದ ವ್ಯವಸ್ಥೆಯನ್ನು ಹೊಂದಿತ್ತು ಅಂತಹ ಸಮಾಜವನ್ನು ಜಾತಿ ಮುಕ್ತ ಸಮಾಜ, ಜಾತಿರಹಿತ ಸಮಾಜವನ್ನಾಗಿ ಮಾಡಲು ಬಸವಣ್ಣನವರು ಬಾಲ್ಯದಿಂದಲೇ ಸಾಕಷ್ಟು ಶ್ರಮಿಸಿದರು ಎಂದು ಹೇಳಬಹುದು.

ಬಸವಣ್ಣನವರು ವಂಶಪಾರಂಪರ್ಯವಾಗಿ ಯಾವುದೇ ಅಧಿಕಾರವನ್ನು, ಯಾವುದೇ ರಾಜಕೀಯ ಬೆಂಬಲವನ್ನು ಪಡೆದಂತಹ ವ್ಯಕ್ತಿಯಲ್ಲ., ಆದರೂ ಅವರ ಕಾಯಕದ ಶ್ರದ್ದೇ ಅವರನ್ನು ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿ ಪದವಿಗೆ ಕರೆದೊಯಿತು ಎಂದು ಹೇಳಬಹುದು ಆ ಪದವಿಯಲ್ಲಿದ್ದಾಗ್ಯೂ ಕೂಡಾ ಅವರು ತಮ್ಮ ಕಾಯಕವನ್ನು, ವಚನಗಳ ರಚನೆಯನ್ನು ಕೈಬಿಡಲಲ್ಲಿ ಮತ್ತು ಸಾಮಾಜಿಕ, ಧಾರ್ಮಿಕ ವಿಚಾರಗಳಿಂದ ಅಂದಿನ ಜಾತಿ ಸಮಾಜವನ್ನು ಜಾತಿರಹಿತ ಸಮಾಜವನ್ನಾಗಿ ಮಾಡಲು ಸಾಕಷ್ಟು ಹೋರಾಡಿದರು. ಈ ಸಮಯದಲ್ಲಿ ಅವರು ತಮಗೆ ಎದುರಾದ ಹಲವಾರು ದೊಡ್ಡ ದೊಡ್ಡ ಸಮಸ್ಯೆಗಳು ತಾರಕಕ್ಕೇರಿದರು ತಮ್ಮ ರಾಜಕೀಯ ಜೀವನಕ್ಕೆ ಯಾವುದೇ ತೊಂದರೆ ಆಗದ ಹಾಗೇ ಜಾಣ್ಮೆಯಿಂದ ಅಂತಹ ಸಮಸ್ಯೆಗಳನ್ನು ಪರಿಹರಿಸಿದಂತಹ ವ್ಯಕ್ತಿ ಬಸವಣ್ಣನವರು, ಅಂದಿನ ಜಾತಿ ಸಮಾಜದಲ್ಲಿ ಮೇಲ್ವರ್ಗದವರೇ ಬಸವಣ್ಣನವರ ವಿಚಾರಗಳಿಂದ ಮತ್ತು ಅವರು ಮಾಡುವ ಕೆಲಸಗಳಿಂದ

ಅವರ ಮೇಲೆ ಮಾರಣಾಂತಿಕ ಹಲ್ಲೆಯನ್ನು ಮಾಡಲು ಸಿದ್ದರಾದಾಗ್ಯೂ ಕೂಡಾ ಯಾವುದೇ ರೀತಿಯಾಗಿ ಅಂಜದೇ, ಅಳುಕದೇ ತಮ್ಮ ವಿಚಾರಗಳನ್ನು ಮುಕ್ತವಾಗಿ ಹೇಳಿ ಸಮಾಜ ಸುಧಾರಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದವರು ನಮ್ಮ ಭಕ್ತಿ ಭಂಡಾರಿ ಬಸವಣ್ಣನವರು.

**ಉದ್ದೇಶಗಳು**

1. ಬಸವಣ್ಣನವರ ಪೂರ್ವಕಾಲದ ಜಾತಿ ವ್ಯವಸ್ಥೆಯನ್ನು ತಿಳಿಯುವುದು
2. ಬಸವಣ್ಣನವರ ಸಮಕಾಲಿನ ಜಾತಿ ವ್ಯವಸ್ಥೆಯನ್ನು ತಿಳಿಯುವುದು.
3. ಬಸವಣ್ಣನವರ ಜಾತಿರಹಿತ ಸಾಮಾಜಿಕ ವಿಚಾರಗಳನ್ನು ತಿಳಿಯುವುದು.

**ಮೆಥಡಾಲಜಿ**

ಈ ಲೇಖನವನ್ನು ಬರೆಯಲು ಮಾಧ್ಯಮಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ ಅದರಲ್ಲಿ ಪ್ರಮುಖವಾಗಿ ಪುಸ್ತಕಗಳು, ಮ್ಯಾಗಝಿನಗಳು, ಲೇಕನಗಳು ಮತ್ತು ಅಂತರಜಾಲದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ.

**ಜಾತಿ ರಹಿತ ಸಮಾಜಕ್ಕೆ ಬಸವಣ್ಣನ ವಿಚಾರಗಳು**

ಜಾತಿರಹಿತ ಸಮಾಜಕ್ಕೆ ಬಸವಣ್ಣನವರ ಹಲವಾರು ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ., ಇವರು 12ನೇಯ ಶತಮಾನದಲ್ಲಿ ಮಾಡಿದಂತಹ ವಿಚಾರಗಳು ಸುಧಾರಣೆಗಳು 21ನೇಯ ಶತಮಾನದಲ್ಲಿಯೂ ಹೆಚ್ಚು ಹೆಚ್ಚು ಪ್ರಚಲಿತವಾಗಿವೆ ಅಲ್ಲದೆ ಇಂದಿನ ಸಮಾಜಕ್ಕೆ ಸಮಾಜ ಸುಧಾರಣಾಕಾರರಿಗೆ ಮಾದರಿಯಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅದರಲ್ಲಿಯೂ ಅಸ್ಪೃಶ್ಯರಿಗಾಗಿ ಮಾಡಿದ ಹೋರಾಟವನ್ನು ಇಂದಿನ ಸಮಾಜ ಸೂರ್ಯಚಂದ್ರರಿರುವರೆಗೆ ನೆನಪಿಡುವಂತಾಗಿದೆ.

ಬಸವಣ್ಣನವರು ಮೇಲು, ಕೀಳುವರ್ಗದವರ ಸಮಾನತೆಗಾಗಿ, ಗಂಡು ಹೆಣ್ಣಿನ ಸಮಾನತೆಗಾಗಿ, ಅಸ್ಪೃಶ್ಯರು ಸಮಾಜದಲ್ಲಿ ಸಮಾನವಾಗಿ ಬಾಳಬೇಕು ಎನ್ನುವ ಕನಸನ್ನು ಹೊತ್ತು ಅವು ಸಕಾರಗೊಳ್ಳಲು ಹಲವಾರು ವಿಚಾರಗಳನ್ನು ಜಾರಿಗೆ ತಂದರು ಅವುಗಳನ್ನು ಈ ಕೆಳಗಿನಂತೆ ನಾವು ನೋಡಬಹುದು.

1. ಸಮಾಜದಲ್ಲಿ ಎಲ್ಲರೂ ಸಮಾನರು : ಮಾನವ ಮಾನವರಲ್ಲಿ ವಿಭಜನೆ ಮಾಡಿ ಕೆಲವರನ್ನು ಅಸ್ಪೃಶ್ಯರೆಂದು ಕೆಲವರನ್ನು ಸ್ಪಶ್ಯರೆಂದು ಕಾಣುತ್ತಿದ್ದರು ಉತ್ತಮ ಹಾಗೂ ಕೀಳು ಕುಲಗಳಲ್ಲಿ ಹುಟ್ಟಿದವರು ಎಂದು ಭಾವಿಸಿ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತೀರಿ., ಈ ಜಾತಿ ಅನ್ನುವುದು ಕೆಲಸದಿಂದ ನಿರ್ಧಾರವಾಗುತ್ತದಯೇ ಹೊರತು ಹುಟ್ಟಿನಿಂದ ನಿರ್ಧಾರವಾಗುತ್ತಯೇ ಹೊರತು ಹುಟ್ಟಿನಿಂದ ನಿರ್ಧಾರವಾಗುವುದಿಲ್ಲ ಎಂದು ಹೇಳಿದರು., ಇದನ್ನು ಬಸವಣ್ಣನವರು ತಮ್ಮ ವಚನದಲ್ಲಿ ಈ ರೀತಿ ಹೇಳುತ್ತಾರೆ.

– “ಕಾಸಿ ಕಮ್ಮಾರನಾದ ಬಿಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ ।
ಕರ್ಣದಲಿಜನಿಸುವವರುಂಟೇ ಜಗದೊಳಗೆ ?
ಇದು ಶರಣ ಕೂಡಲ ಸಂಗಮದೇವಾ
ಅಂಗಸ್ಥಲ ಅರಿತವನೇ ಶರಣರು”

ವ್ಯಕ್ತಿಯು ತನ್ನ ಅರ್ಹತೆ, ಶಕ್ತಿ ಸಾಮರ್ಥ್ಯ ಹಾಗೂ ಮನೋಧರ್ಮ ಅನುಸರಿಸಿ ಕಾಯಕ / ಕಾರ್ಯವನ್ನು ಸಮಾಜದಲ್ಲಿ ಮಾಡುವನು, ಕಂಬಾರ, ಕುಂಬಾರ, ಅಗಸ ಮುಂತಾದವು ಇವು ಕೆಲಸಗಳೇ ಹೊರತು ಕುಲಗಳಲ್ಲ, ಜಾತಿಗಳಲ್ಲ ಎಂದು ಹೇಳಿದರು.

2. ಎಲ್ಲಾ ಜೀವಿಗಳಿಗೂ ಒಳ್ಳಿತನ್ನು ಬಯಸುವವನೇ ಶ್ರೇಷ್ಠ ಜಾತಿಯವನು : ಬಸವೇಶ್ವರರು ಶ್ರೇಷ್ಠ ಕುಲದಲ್ಲಿ ಜನ್ಮತಾಳಿದರು. ಅದನ್ನು ಅನುಸರಿಸಿ ಉತ್ತಮವಾದ ಮಾನವ ಕುಲವನ್ನು, ವಿಶ್ವ ಕುಟುಂಬವವನ್ನು, ವಿಶ್ವ ಮಾನವತಾವಾದವನ್ನು ನಿರ್ಮಾಣ ಮಾಡಲು ಪ್ರಯತ್ತಿಸಿ ಆಂದೋಲನದ ಹಾದಿಯನ್ನು ಹಿಡಿಯಲು ಹಿಂದೆ ಮುಂದೆ ನೋಡಲಿಲ್ಲ. ಇದನ್ನು ಸಹಿತ ಅವರು ತಮ್ಮ ವಚನದ ಮೂಲಕ ಈ ರೀತಿ ಹೇಳಿದ್ದಾರೆ.

– “ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ
ಕುಲವೇನು ಆವಂದಿರ ಕುಲವೇನು?
ಸಕಲ ಜೀವಾತ್ಮರಿಗೆ ಲೇಸನು ಬಯಸುವ
ನಮ್ಮ ಕೂಡಲ ಸಂಗನ ಶರಣಕ್ಕೆ ಕುಲಜರು !

ಅಂದರೆ ಎಲ್ಲರಿಗೂ ಕಲ್ಯಾಣ ಬಯಸುವವನೇ ಶ್ರೇಷ್ಠ ಕುಲಜ, ಇತರರಿಗೆ ಸದಾ ಕೇಡು ಬಯಸುವ ನಿಚಕುಲಜ ಎಂದು ಹೇಳುತ್ತಾ ದೈಹಿಕವಾಗಿ, ಮಾನಸಿಕವಾಗಿ ಇತರರನ್ನು ಕೊಲ್ಲುವವರು, ಶೋಷಿಸಿಸುವವರು ಮಾದಿಗರು, ಹೊಲಸು ತಿನ್ನುವವರು ಹೊಲೆಯರು ಎಂದು ತಮ್ಮ ವಚನದಲ್ಲಿ ಅರ್ಥಪೂರ್ಣವಾಗಿ ಎಲ್ಲರ ಮನ ಮುಟ್ಟುವಂತೆ ಹೇಳಿದ್ದಾರೆ.

3. ಬಸವಣ್ಣನವರು ಜಾತಿರಹಿತ ಸಮಾಜಕ್ಕೆ ತಮ್ಮ ಇನ್ನೊಂದು ವಚನದಲ್ಲಿ ಈ ರೀತಿ ಹೇಳುತ್ತಾರೆ ‘ಶಿವಭಕ್ತರಾದವರು ಒಂದೇ ಅಂದರೆ ಸಮಾಜದಲ್ಲರುವ ಜಾತಿ, ಕುಲ, ಧರ್ಮಗಳಲ್ಲಿ ಶಿವಭಕ್ತಿಯು ಸರ್ವಸಮಾನತೆಗೆ ದಾರಿಯೊಂದು ತಿಳಿದು ಶಿವನೊಲಿದವರಿಗೆ ಶಿವನ ಒಲಿಸಲು ಬಂದ ಶಿವಭಕ್ತರಿಗೆ ಜಾತಿಗಳುಂಟೆ’ ಎಂದು ಪ್ರಶ್ನೆಯನ್ನು ತಮ್ಮ ವಚನದ ಮೂಲಕ ಇಡಿ ಮನುಜ ಜನಾಂಗಕ್ಕೆ ಕೇಳುತ್ತಾರೆ.

4. ಬಸವಣ್ಣನವರು ಜಾತಿರಹಿತ ಸಮಾಜವನ್ನು ಮಾಡಲು ಕರ್ಮಸಿದ್ಧಾಂತವನ್ನು ತಿವ್ರವಾಗಿ ಖಂಡಿಸಿ ತಿರಸ್ಕರಿಸುತ್ತಾರೆ., ಜಾತಿ ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ವೇದಕ್ಕೆ ಬರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕೆ ತರ್ಕದ ಚೆನ್ನ ಬಾರನೆತ್ತುವೆ ಆಗಮದ ಮೂಗ ಕೊಯ್ಯುವೆ ಮಹಾದಾನಿ ಕೂಡಲ ಸಂಗಮದೇವ ಮಾದರ ಚನ್ನಯ್ಯನ ಮಗನು ನಾನು, ಕೀಳು ಕುಲದಲ್ಲಿ ನಾನು ಹುಟ್ಟಿದೆನೆ ಮತ್ತೆ ಕೀಳು ಕುಲದಲ್ಲಿಯೇ ಹುಟ್ಟುವೆ ಎಂದು ಹೇಳುವುದರ ಮೂಲಕ ಜಾತಿಯನ್ನು ತೀವ್ರವಾಗಿ ತಿರಸ್ಕರಿಸಿದರು.

5. ಹುಟ್ಟಿಂದ ಜಾತಿ ನಿರ್ಧಾರವಾಗುವುದಿಲ್ಲ ಹುಟ್ಟಿನಿಂದ ಯಾರು ಮೇಲು ಕೀಳು ಎಂದು ಜಾತಿಯು ನಿರ್ಧರಿತವಾಗುವುದಿಲ್ಲ., ಭೂಮಿಯ ಮೇಲೆ ಹುಟ್ಟಿದ ಎಲ್ಲ ಮನುಷ್ಯರು ಒಂದೇ, ಅದರಲ್ಲಿಯೂ ಲಿಂಗದರಿಸಿದ ಮೇಲೆ ಮೇಲ್ವರ್ಗದ ಹಾಗೂ ಕೀಳವರ್ಗ ಎನ್ನುವುದೇ ಇಲ್ಲ ಎಂದು ಹೇಳಿದರು., ಇದು ಕೇಲವ ಮನುಷ್ಯನ ಭಾವನೆಯಾಗಿದೆ ಅವನ ಮಾನಸಿಕ ಕಲ್ಪನೆಯೊಗಿದೆ, ಇದನ್ನು ಮನುಷ್ಯ ಮಾಡಿಕೊಂಡ ಮನಸ್ಸಿನ ಕಟ್ಟಳೆಯಾಗಿದೆ ಎಂದು ಹೇಳುತ್ತಾ ಶ್ರೇಷ್ಠ ಜಾತಿ ಕನಿಷ್ಠ ಜಾತಿ ಎಂದು ಮನುಷ್ಯರು ತಮ್ಮಲ್ಲಿ ಮಾಡಿಕೊಂಡ ಕೃತಕ ಗೋಡೆಗಳು ಎಂದು ಹೇಳುತ್ತಾರೆ.

6. ಬಸವಣ್ಣನವರು ಈ ಸಮಾಜವನ್ನು ಜಾತಿ ಮುಕ್ತ ಸಮಾಜವನ್ನಾಗಿ ಮಾಡಲು ಎಲ್ಲರು ನಮ್ಮ ಕೂಡಲ ಸಂಗನ ಶರಣರಾಗಿದ್ದಿರಿ ಎಂದು ಹೇಳುತ್ತಾರೆ ಶರಣರ ಸಮಾಜವನ್ನು ನಿರ್ಮಾಣ ಮಾಡಲು ಕಂಕಣ ತೊಟ್ಟು ಹೋರಾಡಿದರು ಮತ್ತು ಇದಕ್ಕಾಗಿ ಮಾದರ ಚನ್ನಯ್ಯನ ಮಗನ ಹಾಗೂ ಡೋಹರ ಕಕ್ಕಯ್ಯನ ಮಗಳ ಜೊತೆ ವಿವಾಹ ಮಾಡಿ ಜಾತಿ ಮುಕ್ತ ಸಮಾಜಕ್ಕೆ ತಾವು ಯಾವುದೇ ತರಹದ ಹೋರಾಟ ಮಾಡಲು ಸಿದ್ದರಾಗಿದ್ದೇವೆ ಎಂದು ಸಮಾಜಕ್ಕೆ ತಮ್ಮ ಕಾರ್ಯದಿಂದ ಹೇಳಿದರು.

7. ಜಾತಿ ಮುಕ್ತ ಸಮಾಜ ನಿರ್ಮಾಣವಾಗಲು ಅಸ್ಪೃಶ್ಯತೆಯನ್ನು ಮೊದಲು ನಾಶ ಮಾಡಬೇಕು ಎಂದು ಹೇಳಿದರು., ಈ ಅಸ್ಪೃಶ್ಯತೆ ಎಲ್ಲರ ಮನದಿಂದ ಹೋಯಿತೆಂದರೆ ಜಾತಿಯು ನಾಶವಾಗುತ್ತದೆ ಎಂಬ ಬಲವಾದ ನಂಬಿಕೆ ವಿಭೂತಿ ಪುರಷನದಾಗಿತ್ತು ಎಂದು ಹೇಳಬಹುದು.

8. ದಾಸೋಹ ತತ್ವದ ಮೂಲಕ ಜಾತಿ ಅಸಮಾನತೆಯನ್ನು ಹೊಡೆದು ಹಾಕಿ ಜಾತಿರಹಿತ ಸಮಾಜವನ್ನು ನಿರ್ಮಾಣ ಮಾಡಬಹುದು ಎಂದು ಹೇಳಿದರು. ವೃತ್ತಿ ಅಸಮಾನತೆಯನ್ನು ಹೊಡೆದೊಡಿಸಿದಂತೆ ಜಾತಿ ವಿನಾಶವನ್ನು ಮಾಡಲು ದಾಸೋಹ ತತ್ವವನ್ನು ಜಾರಿಗೆ ತಂದರು. ಈ ದಾಸೋಹದಿಂದ ಸಮಾಜದ ಎಲ್ಲ ಜನರು ಒಂದು ಕಡೆ ಕೂಡುತ್ತಾರೆ, ಊಟ ಮಾಡುತ್ತಾರೆ, ಹಂಚಿಕೊಂಡು ತಿನ್ನುತ್ತಾರೆ, ವಿಚಾರಗಳು ಬೇರೆಯುತ್ತವೆ ಅಲ್ಲದೆ ಎಲ್ಲ ಮನಸ್ಸುಗಳು ಒಂದು ಕಡೆ ಕೂಡಿಕೊಂಡು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ., ಇದರಿಂದ ಜಾತಿಯನ್ನು ತೊಲಗಿಸಿಬಹುದೆಂದು ಹೇಳಿದರು.

9. ಸಮಾಜದಲ್ಲಿ ಕೇವಲ ಗಂಡು ಮತ್ತು ಹೆಣ್ಣು ಎಂಬ ಎರಡೇ ಜಾತಿಗಳಿವೆ ಈ ಎರಡು ಜಾತಿಗಳನ್ನು ಬಿಟ್ಟು ಮೂರನೇ ಜಾತಿಯಿಲ್ಲಾ., ಒಂದು ವೇಳೆ ಬೇರೆ ಜಾತಿ ಇದ್ದರೆ ಅದು ಮಾನವನ ಸೃಷ್ಠಿಯಾಗಿದೆ ಎಂದು ಹೇಳಿದರು., ಇದನ್ನು ಎಲ್ಲಾ ಮಾನವರು ತಿಳಿದು ನಡೆದರೆ ಜಾತಿರಹಿತ ಸಮಾಜ ತಾನೇ ನಿರ್ಮಾಣವಾಗುತ್ತದೆ ಎಂಬ ಬಲವಾದ ನಂಬಿಕೆ ಬಸವಣ್ಣನವರದಾಗಿತ್ತು.

**ಉಪಸಂಹಾರ**

ಒಟ್ಟಿನಲ್ಲಿ ಹೇಳುವುದಾದರೆ ಜಾತಿರಹಿತ ಸಮಾಜಕ್ಕೆ ಬಸವಣ್ಣನವರು ಸಾಕಷ್ಟು ಶ್ರಮಿಸಿದಂತಹ ಮಹಾನ ಮಾನವತಾವಾದಿ., ಅವರು 12ನೇ ಶತಮಾನದಲ್ಲಿ ಮಾಡಿದಂತಹ ಸಾಮಾಜಿಕ ಕ್ರಾಂತಿಯು ಇಂದಿಗೂ ತನ್ನ ಬೆಂಕಿಯ ಕೆನ್ನಾಲಿಗೆಯಿಂದ ಸಮಾಜಕ್ಕೆ ಬಿಸಿಯನ್ನು ಮುಟ್ಟಿಸುತ್ತಿದೆ ಎಂದು ಹೇಳಬಹುದು. ಇವರ ಹಲವಾರು ವಿಚಾರಗಳು ಇಂದಿಗೂ ಕೂಡಾ ಸಮಾಜ ಸುಧಾರಕರನ್ನು, ವಿದ್ವಾಂಸರನ್ನು, ಸಂಶೋಧಕರನ್ನು ಹಲವು ಬಗೆಯಲ್ಲಿ ವಿಚಾರಕ್ಕಿಡು ಮಾಡುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಸ್ತ್ರೀ–ಪುರಷರ ಸಮಾನತೆ, ಜಾತಿ ಮುಕ್ತ ಸಮಾಜ, ಎಲ್ಲರೂ ಒಂದೇ ಎಂಬ ಭಾವನೆಗಳನ್ನು ಹುಟ್ಟು ಹಾಕಲು ಹಗಲಿರುಳು ಶ್ರಮಿಸಿ, ಕಲ್ಯಾಣದಲ್ಲಿ ಮಹಾನ ಕ್ರಾಂತಿಯನ್ನು ಮಾಡಿದ ಕ್ರಾಂತಿಯ ಹರಿಕಾರ.

**ಆಧಾರ ಗ್ರಂಥಗಳು**

1. ಅನುಭವ ಮಂಟಪ : ಮಾತೆ ಮಹಾದೇವಿ
2. ಡಾ. ಎಸ್. ಶಿವರಾಜಪ್ಪನವರ ಸಮಗ್ರಸಾಹಿತ್ಯ : ಶರಣ ದರ್ಶನ
3. ಡಾ. ಟಿ. ಜಿ. ಪ್ರಭಾಶಂಕರ 'ಪ್ರೇಮಿ' : ಬಸವ ಚೇತನ ಮತ್ತು ಇತರ ಕೃತಿಗಳು
4. ಎಂ. ಚಿದಾನಂದ ಮೂರ್ತಿ : ವಚನ ಸಾಹಿತ್ಯ
5. ವೀರ ಶೈವ ಚರಿತ್ರೆ ಮತ್ತು ಚಾರಿತ್ರಿಕ ಗ್ರಂಥಗಳು : ಶ್ರೀ ಬಿ.ಬಿ.ಶ್ರೀನಿವಾಸರಾವ್
6. ಶರಣರು ಕಂಡ ಬಸವಣ್ಣ : ಎಚ್.ಡಿ.ಚಂದನಗೌಡರ್